ಶ್ರೀ ಕೆ.ಬಿ.ಮಲ್ಲಿಕಾರ್ಜುನ: ಮಾನ್ಯ ಅಧ್ಯಕ್ಷರೇ, ನಾನು ಒಬ್ಬನೇ ಮಾತನಾಡುತ್ತಿದ್ದೇನೆ; ನೀವು ನಮ್ಮ ರಕ್ಷಣೆಗೆ ಬರಬೇಕು. ಅವರು ಒತ್ತಡವನ್ನು ತರುತ್ತಾರೆಂದು ಹೇಳಿದರು. ನಾವು ಯಾವ ಒತ್ತಡವನ್ನು ಪರಿಶೀಲಿಸಿ, ಬೇರೆಯವರು ಒತ್ತಡ ತಂದಾಗ ವರ್ಗಾಯಿಸಿ ಎಂದು ಹೇಳುತ್ತಾರೆ. ಒಬ್ಬ ಕಾರ್ಯಕರ್ತರು ಕೊಟ್ಟರೂ ಮಾಡುತ್ತಾರೆ, ಎಂ.ಎಲ್.ಎ.ಗಳಿಗೆ ಮೂರು ಕಾಸಿನ ಬೆಲೆ ಇಲ್ಲ. ನೀವು ಎಂ.ಎಲ್.ಎ.ಗಳು ಒತ್ತಡ ತಂದರೂ ನೀವು ಏನು ಮಾಡುತ್ತಿಲ್ಲ, ನಿಮ್ಮ ಪಕ್ಷದ ಕಾರ್ಯಕರ್ತರ ಒತ್ತಡಕ್ಕೆ ನೀವು ಮಾಡುತ್ತಿದ್ದೀರಿ.

ಶ್ರೀ ಎಂ.ಮಹದೇವ್: ನಾವು ಪರಿಶೀಲಿಸಿ, ವರ್ಗಾಯಿಸಿ ಎಂದು ಬರೆಯುತ್ತೇವೆಯೇ ಹೊರತು, ಪರಿಶೀಲಿಸಿ ಎಂದು ಒಂದು ಕಡೆ, ವರ್ಗಾಯಿಸಿ ಎಂದು ಒಂದು ಕಡೆ ಬರೆಯುವುದಿಲ್ಲ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ: ನಾನು ಒಂದು ನೂರು ಪತ್ರಗಳನ್ನು ತಂದುಕೊಡುತ್ತೇನೆ, ನಿಮ್ಮ ಕಚೇರಿಯಲ್ಲಿ ಜೆರಾಕ್ಸ್ ತೆಗೆಸಿ, ಆದರಲ್ಲಿ ಬರೀ ಪರಿಶೀಲಿಸಿ ಎಂದು ಬರೆಯುತ್ತೀರೇ ಹೊರತು, ಒಂದು ಸಣ್ಣ ಗೌರವವನ್ನು ವಿರೋಧ ಪಕ್ಷದ ಶಾಸಕರಿಗೆ ಕೊಡುತ್ತಾ ಇಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ: ನಾವು ಕೊಟ್ಟಂತಹ ಪೇಪರ್ ಮೇಲೆ ಏನೂ ಬರೆಯದೇ ಹಾಗೆ ಇಟ್ಟುಕೊಳ್ಳುವಂಥಾದ್ದು ಇದೆ.

ಅಧ್ಯಕ್ಷರು: ಡಾ:ಮಾಲಕರೆಡ್ಡಿಯವರೇ, ಈ ವಿಷಯ ಎಲ್ಲಿಂದ ಎಲ್ಲಿಗೋ ಹೋಗುತ್ತಿದೆ, ದಯವಿಟ್ಟು ಬೇಗ ಮುಕ್ತಾಯಗೊಳಿಸಿ.

(ಗೊಂದಲ)

ಆ) ರಾಜ್ಯ ಸರ್ಕಾರಿ ನೌಕರರ ರರ್ಗಾವಣೆ ನೀತಿ ಕುರಿತು

ಶ್ರೀ ಬಿ.ಸೋಮಶೇಖರ್ (ಮಳವಳ್ಳಿ): ಮಾನ್ಯ ಸಭಾಧ್ಯಕ್ಷರೇ, ಈ ಸರ್ಕಾರದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಏಪ್ರಿಲ್ ತಿಂಗಳಿಗಿಂತ ಹಿಂದೆ ಏನು ಹೇಳಿದರೆಂದರೆ, ನಮ್ಮ ಸರ್ಕಾರ ಟ್ರಾನ್ಸ್‌ಫರ್ ಪಾಲಿಸಿ ಟ್ರಾನ್ಸ್‌ಪರೆಂಟ್ ಆಗಿ ದಿನಾಂಕ:1.4.2002 ರಿಂದ ಜಾರಿಗೆ ತರುತ್ತದೆಂದು ದೊಡ್ಡ ಪ್ರಚಾರವನ್ನು ತೆಗೆದುಕೊಂಡರು ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಯವರು ಅಡ್‌ಮಿನಿಸ್ಟ್ರೇಟೀವ್ ರಿಫಾರ್ಮ್ಸ್ ಕಮಿಷನ್ ಎಂದು ಮಾನ್ಯ ಹಾರನಹಳ್ಳಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಮಾಡಿದ್ದೇವೆಂದು ಹೇಳಿದರು. ಅವರು ಏನು ಶಿಫಾರಸ್ಸು ಕೊಡುತ್ತಾರೆ, ಅದನ್ನು ನಾವು ಅನುಷ್ಠಾನಕ್ಕೆ ಕೊಡುತ್ತೇವೆಂದು ಹೇಳಿದರು. ಅದಕ್ಕೆ ನಾವು ಸಂತೋಷಪಟ್ಟೆವು. ಆ ಕಡೆಯ ಶಾಸಕರು ಶಿಫಾರಸ್ಸು ಮಾಡುವುದು ಬೇಡ, ನಾವು ಶಿಫಾರಸ್ಸು ಮಾಡುವುದು ಬೇಡವೆಂದು ಸರ್ಕಾರ ಮಾಡಿದರೆ, ಇವತ್ತು ಎಲ್ಲಾ ಏನಾಗಿದೆ, ನಾವು ಎಂ.ಎಲ್.ಎ.ಗಳು ಇರಲಿ, ಕಾಂಗ್ರೆಸ್ ಕಾರ್ಯಕರ್ತರು ಅಥವಾ ಬೇರೆ ಎಂ.ಎಲ್.ಎ.ಗಳು ನಮ್ಮ ಕ್ಷೇತ್ರಕ್ಕೆ ಡಾಕ್ಟರ್‌ಗಳು ಅಲ್ಲ, ಇನ್‌ಸ್ಪೆಕ್ಟರ್‌ಗಳನ್ನು ಪೋಸ್ಟ್ ಮಾಡುತ್ತಿದ್ದಾರೆ. ನಾನು ಒಂದು ವಿಷಯ ಹೇಳುವುದೇನೆಂದರೆ ಕಳೆದ ಎರಡೂವರೆ ವರ್ಷಗಳಿಂದ ಎಷ್ಟು ನೋವನ್ನು ಅನುಭವಿಸಿದ್ದೇವೆಂದರೆ, ಇಲ್ಲಿ ನಾವು ಮಂತ್ರಿಗಳಾಗಿ ಕೆಲಸವನ್ನು ಮಾಡಿದ್ದೇವೆ. ನಾನು ರೆವಿನ್ಯೂ ಮಿನಿಸ್ಟರ್ ಆಗಿ ಕೆಲಸ ಮಾಡಿದ್ದೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನನ್ನ ತಾಲ್ಲೂಕಿಗೆ ಇಂಥ ತಹಶೀಲ್ದಾರರು ಬೇಕೆಂದು ಫೋನ್ ಮಾಡಿದರು, ಇನ್ನೊಬ್ಬರು ಮಾನ್ಯ ಗದ್ದಿಯವರು ಮಂತ್ರಿಗಳಾಗಿದ್ದಾರೆ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ, ನಮ್ಮ ಪಕ್ಷದ ಜಿಲ್ಲಾ ಪಂಚಾಯತ್ ಅಧ್ಯಕ್ಷರು, ತಾಲ್ಲೂಕು ಪಂಚಾಯತ್ ಅಧ್ಯಕ್ಷರು, ಬಂದು ನನ್ನ ಕಚೇರಿಯಲ್ಲಿ

ಧರಣಿ ಮಾಡಿದರು. ನೀವು ನಮ್ಮ ಪಕ್ಷಕ್ಕೆ ರಕ್ಷಣೆ ಕೊಡಬೇಕು, ನೀವು ಆ ಶಾಸಕರಿಗೆ ಹೇಳಬಾರದೆಂದು ಹೇಳಿದರು. ಆಗ ನಾನು ಅವರಿಗೆ, ಶಾಸಕರುಗಳಿಗೆ ನಾವು ಮಾರ್ಯಾದೆ ಕೊಡಬೇಕೆಂದು ಹೇಳಿದೆ. ಶಾಸಕರು ಕೆಲಸ ಮಾಡಬೇಕೆಂದರೆ ಹೊಂದಾಣಿಕೆಯಾಗುವಂತಹ ಅಧಿಕಾರಿಗಳನ್ನು ಹಾಕಿಕೊಡಬೇಕೆಂದು ಹೇಳಿ ನನ್ನ ಹತ್ತಿರ ಬಂದು ಧರಣಿ ಮಾಡಿದರು. ಮಾನ್ ಧರ್ಮ್‌ಸಿಂಗ್‌ರವರು ಎನು ಹೇಳಿದರು, ನಮ್ಮ ಕಾರ್ಯಕರ್ತರು ಏನು ಹೇಳಿದರು, ಅವರಿಗೆ ಬೇಕಾದಂತಹ ತಹಶೀಲ್ದಾರರನ್ನು ಹಾಕಿಕೊಟ್ಟೆ ಎಂದು ಇವತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಬ್ಬ ಕಾನ್‌ಸ್ಟೇಬಲ್‌ನನ್ನು ಅವರ ಕಾರ್ಯಕರ್ತರನ್ನು ಮಾಡಿದ ಹಾಗೆ ಮಾಡುತ್ತಾರೆ, ಇದಾ ನಿಮ್ಮ ಟ್ರಾನ್ಸ್‌ಫರ್ ಪಾಲಿಸಿ? ಇದಕ್ಕೆ ಎಷ್ಟು ಉದಾಹರಣೆಯನ್ನು ಕೊಡಲಿ? ನಾವು ಸರ್ಕಾರವನ್ನು ನಡೆಸಿದ್ದೇವೆ. ನಿಮ್ಮ ಶಾಸಕರನ್ನೇ ಕೇಳಿ, ನಿಮ್ಮ ಕಾಂಗ್ರೆಸ್ ಶಾಸಕರು ಏನು ಹೇಳುತ್ತಿದ್ದಾರೆಂದರೆ ನಿಮ್ಮ ಸರ್ಕಾರವೇ ಎಷ್ಟೋ ಮೇಲಾಗಿತ್ತು ಎಂದು ಪ್ರೈವೇಟಾಗಿ ಹೇಳುತ್ತಾರೆ.

ಶ್ರೀ ಎಂ.ಮಹದೇವ್: ನಿಮಗೆ ಅನುಕೂಲವಾದಂತೆ ಮಾಡಿದಿರಿ.

(ಗೊಂದಲ)

ಶ್ರೀ ಬಿ.ಸೋಮಶೇಖರ್: ನಾವು ನಮ್ಮ ನೋವನ್ನು ಹೇಳಬೇಕಾಗುತ್ತದೆ, ನಾನು ಹಿಂದೆ ರೆವಿನ್ಯೂ ಮಿನಿಸ್ಟರ್ ಆಗಿದ್ದೆ. ಇವರು ಒಬ್ಬ ತಹಶೀಲ್ದಾರರನ್ನು ಮೂರು ಬಾರಿ ಟ್ರಾನ್ಸ್‌ಫರ್ ಮಾಡಿದರು, ಉದಾಹರಣೆಗೆ ಮಹದೇವ್‌ರವರು, ಒಬ್ಬ ತಹಶೀಲ್ದಾರರನ್ನು ಮೂರು ಬಾರಿ ಡ್ರಾನ್ಸ್‌ಫರ್ ಮಾಡಿದರು. ಉದಾಹರಣೆಗೆ ಮಹದೇವ್‌ರವರು, ಒಬ್ಬ ತಹಶೀಲ್ದಾರ್ ಸಸ್ಪೆಂಡ್ ಮಾಡಿದಂಥವರನ್ನು ಅವರ ಕ್ಷೇತ್ರದಲ್ಲಿ, ನನ್ನ ಕ್ಷೇತ್ರಕ್ಕೆ ಹಾಕಿಸಿ ಎರಡು ವರ್ಷಗಳ ಕಾಲ ನಾನು ಮೂರು ಸಾರಿ ಟ್ರಾನ್ಸ್‌ಫರ್ ಮಾಡಿಸಿದ್ದೇನೆ. ಇವರು ಮಾಡಿಕೊಟ್ಟಿದ್ದಾರೆ ಪಾಪ. ಮಾನ್ಯ ಮುಖ್ಯ ಮಂತ್ರಿಗಳು ರಿರ್ಟನ್ ಮಾಡಿದ್ದಾರೆ. ನಾನು ಹಿಂದೆ ಮಂತ್ರಿಯಾಗಿದ್ದಂಥವನ್ನು ಒಬ್ಬ ತಹಶೀಲ್ದಾರನನ್ನು ಇನ್ನೂ ಟ್ರಾನ್ಸ್‌ಫರ್ ಮಾಡಿಸುವುದಕ್ಕೆ ಆಗಲಿಲ್ಲವೆಂದರೆ, ಇದರ ಅರ್ಥ ಏನು? ಇದಾ ನಿಮ್ಮ ಕಾಂಗ್ರೆಸ್ ಪಾಲಿಸಿ? ಇನ್ನೂ ರಿಪೋರ್ಟ್ ಮಾಡಿಕೊಂಡಿಲ್ಲ, ಅದಕ್ಕೂ ಒಂದು ಒತ್ತಡ, ಇವತ್ತು ದಂಧೆ, ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಇರಬಹುದು, ಸಬ್ ಇನ್‌ಸ್ಪೆಕ್ಟರ್ ಇರಬಹುದು, ನಮ್ಮ ಹತ್ತಿರ ಒಂದು ಲೆಟರ್, the letter is only a licence to collect the money. I have to charge the government. ಎಷ್ಟು ಜನ ಡುಡ್ಡಿಗಾಗಿ ಈ ರೀತಿ ಮಾಡತ್ತಿದ್ದಾರೆ, ನಾನು ತೋರಿಸಲಾ, ಹೇಳಲಾ...

(ಗೊಂದಲ)

ಶ್ರೀ ಬಿ.ಸೋಮಶೇಖರ್: ಕಾನ್‌ಸ್ಟೇಬಲ್‌ಗಳಿಗೆ, ಹೆಡ್‌ಕಾನ್ ಸ್ಟೇಬಲ್‌ಗಳಿಗೆ, ಸಬ್ ಇನ್ ಸ್ಪೆಕ್ಟರ್‌ಗಳಿಗೆ, ಸರ್ಕಲ್ ಇನ್‌ಸ್ಪೆಕ್ಟರ್‌ಗಳಿಗೆ, ನೀವು ಇಲ್ಲಿ ಟ್ರಾನ್ಸ್‌ಫರ್ ಪಾಲಿಸಿ ಎಂದು ಹೇಳುತ್ತೀರಿ, 25 ವರ್ಷಗಳಲ್ಲಿ 24 ವರ್ಷಗಳು ಅವರ ಸರ್ವೀಸ್‌ನಲ್ಲಿ ಒಂದೇ ಜಿಲ್ಲೆಯಲ್ಲಿ ಇರುವಂಥಾದ್ದು, ಇದಾ ಟ್ರಾನ್ಸ್‌ಫರ್ ಪಾಲಿಸಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆಯಿತು, 25 ವರ್ಷಗಳಲ್ಲಿ 24 ವರ್ಷಗಳು ಇದ್ದಾರೆಂದರೆ ಇವರು ಇದ್ದಾಗ ಏನು ಮಾಡಿದರು?

(ಗೊಂದಲ)

ಅಧ್ಯಕ್ಷರು: ಆಯಿತು, ಇದನ್ನು ಮುಕ್ತಾಯ ಮಾಡೋಣ.

(ಗೊಂದಲ)

**Mr. SPEAKER:** Don't take down, ನೀವು ಏನು ಹೇಳುತ್ತಿದ್ದೀರೆಂಬುದು ಕೇಳಿಸುತ್ತಿಲ್ಲ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಮಾಲಕರೆಡ್ಡಿಯವರು, ನೀವೆಲ್ಲಾ ಪ್ರೆಷರ್ ಹಾಕುತ್ತಿದ್ದೀರೆಂದು ಹೇಳಿದರು. ನಾವು ಪ್ರೆಷರ್ ಹಾಕಿಲ್ಲ.

(ಗೊಂದಲ)

ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೇ ಅವರ ಕಾಲದ್ದನ್ನು ತೆಗೆಯಿರಿ. ನಮ್ಮ ಕಾಲದ್ದನ್ನು ತೆಗೆಯಿರಿ. ಎಷ್ಟು ಟ್ರಾನ್ಸ್‌ಫರೆಂಟ್ ಆಗಿದೆ ಎಂಬುದನ್ನು ನೋಡಿ.

ಶ್ರೀ ಬಿ.ಸೋಮಶೇಖರ್: ಎಲ್ಲಾ ಕಡತಗಳನ್ನು ಸ್ಯುಟಿನೈಜ್ ಮಾಡಿಸಿ I am prepared to resign from the membership.

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ: ಇಲ್ಲಿ ಪ್ರಶ್ನೆ ಬಂದದ್ದು ಮಾನ್ಯ ಆರೋಗ್ಯ ಸಚಿವರು ಒತ್ತಡ ತಂದಿದ್ದಾರೆಂದು ಹೇಳಿದರು. ಒತ್ತಡ ಬಂದಿರುತಕ್ಕದ್ದು ಆಡಳಿತ ಪಕ್ಷದ ಸದಸ್ಯರಿಂದ. ನಾವು ಯಾರೂ ಹೀಗೇ ಮಾಡಿ, ಹಾಗೇ ಮಾಡಿ ಎಂದು ಒತ್ತಡ ಹಾಕಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ನಾವು ವೈಯಕ್ತಿಕವಾಗಿ ಅದು ಮಾಡಿದ್ದೆ ಇದು ಮಾಡಿದ್ದೆ ಎಂದು ಹೇಳಿಕೊಳ್ಳುವುದು ಸರಿಯಲ್ಲ ನಾವೂ ಕೂಡ ಯಾರ್ಯಾರಿಗೆ ಏನು ಮಾಡಿದ್ದೇವೆ, ಏನು ಮಾತನಾಡಿದ್ದೇವೆಂದು ಅವರ ಒಳ್ಳೆಯದು ಕೆಟ್ಟದರ ಬಗ್ಗೆ ನಾವೂ ಹೇಳಬೇಕು. ಯಾರೋ ಒಬ್ಬ ತಹಸೀಲ್ದಾರ್ ನೀವು ಹೇಳಿದ್ದು ಮಾಡಿದ್ದಾನೆ, ಅವರು ಹೇಳಿದ್ದು, ಮಾಡಿದ್ದಾನೆ ಎಂದರೆ, ನಾವು ನೂರಾರು ಮಾಡಿದ್ದೇವೆ, ನಾನು ಹೇಳುವುದಕ್ಕಾಗುತ್ತದೆಯೇ? ಆಡಳಿತದಲ್ಲಿ ಸರಿ ಏನಿಸುವುದನ್ನು ಮಾಡುತ್ತೇವೆ, ಇಲ್ಲವೆಂದುದ್ದನ್ನು ಮಾಡುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಸೋಮಶೇಖರ್‌ರವರೆ, ಖರ್ಗೆಯವರು ಮಾತನಾಡಿದ ಮೇಲೆ, ತಮಗೆ ಅವಕಾಶ ಕೊಡುತ್ತೇನೆ ಮಾತನಾಡಿ. He is on his legs

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆಡಳಿತದಲ್ಲಿದ್ದಾಗ ಅನೇಕ ಜನರು ಬರುತ್ತಾರೆ, ರಿಕ್ವೆಸ್ಟ್ ಮಾಡುತ್ತಾರೆ, ಒಂದು ಆಗಬಹುದು, ಒಂದು ಆಗದಿರಬಹುದು. ನಾವೂ ಕೂಡ 5 ವರ್ಷ ಅಲ್ಲಿ ಕುಳಿತಿದ್ದೆವು, ನಾವು ಯಾರ ಮನೆಗೂ ಹೋಗಲಿಲ್ಲ, ಆಕಸ್ಮಿಕವಾಗಿ ಆಗಿ ಒಂದು ಫೋನ್ ಮಾಡಿರಬಹುದು. ಸಿಂಧ್ಯಾರವರು ಇದ್ದಾರೆ ಕೇಳಿ, ನಾವು ಮುಖ್ಯಮಂತ್ರಿಗಳ ಮನೆಗೆ ಯಾವಾಗಲಾದರೂ ಹೋಗಿದ್ದೇನೆಯೆ? ಐದು ವರ್ಷದಲ್ಲಿ ಒಂದೇ ಒಂದು ಸಾರಿ ಹೋಗಿದ್ದು, ಅದು ವಿರೋಧಪಕ್ಷದ ನಾಯಕನಾಗಿ ಹೋಗಿದ್ದು, ಅದು ಎಂಎಲ್‌ಸಿ ಚುನಾವಣೆ ಇದ್ದಾಗ, ಆಗ

ಶ್ರೀಮಾನ್ ಸಿಂಧ್ಯಾರವರು ಗೃಹಸಚಿವರಾಗಿದ್ದರು, ಅವರಿಗೆ ಗೊತ್ತು. ಇಷ್ಟೊಂದು ಬಿಗಿಯನ್ನು ನಾವೂ ಕೂಡ ಇಟ್ಟುಕೊಂಡು ಬಂದಿದ್ದೇವೆ. ಆದರೆ ಲಘುವಾಗಿ ಯಾರೋ ಒಬ್ಬ ತಹಸಿಲ್ದಾರ್‌ಗೋಸ್ಕರ ಇವತ್ತು ಹೀಗೆ ಮಾತನಾಡಿದರೆ ಹೇಗೆ? ಜೆ.ಹೆಚ್.ಪಟೇಲರು ಇದ್ದರು ಅವರು ಅನೇಕಸಾರಿ ಫೋನ್ ಮಾಡಿದಾಗ ನಾನು ಒಬ್‌ಲೈಜ್ ಮಾಡಿದ್ದೇನೆ. ಮೊನ್ನೆ ಹೆಗಡೆಯವರು ಫೋನ್ ಮಾಡಿದ್ದರು. ಸಿಂಧ್ಯಾರವರಿಗೂ ಗೊತ್ತಿದೆ, ಕಾರಣಾಂತರದಿಂದ ಬದಲಾವಣೆ ಮಾಡಿದ್ದೇವೆ. ಆದರೆ ಮೊದಲು ಅವರು ಹೇಳಿದಾಗ ಅದೇ ಸಬ್‌ಇನ್‌ಸ್ಪೆಕ್ಟರ್‌ಗಳನ್ನು ಹಾಕಿಕೊಟ್ಟಿದ್ದೇವೆ, ಆದರೆ ನಮ್ಮ ಅನೇಕ ವ್ಯತ್ಯಾಸಗಳಿಂದ ಆರು ತಿಂಗಳ ಬಳಿಕ ಕ್ಯಾನ್ಸಲ್ ಮಾಡಬೇಕಾಯಿತು, ಆ ಮಾತು ಬೇರೆ, ನಾನು ಎಲ್ಲರ ಹೆಸರನ್ನು ಹೇಳಿಕೊಳ್ಳುತ್ತಾ ಹೋಗಲೇ? ನಿಮ್ಮೊಬ್ಬರದ್ದು ಆಗಲಿಲ್ಲವೆಂದು ತಕ್ಷಣವೇ ನನ್ನದು ಹಾಗೆ ಆಯಿತು ಹೀಗೆ ಆಯಿತೆಂದು ಹೇಳುವುದು ಸರಿಯಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ: ತಾವುಗಳು ಮಾಡಬೇಕೆಂದು ಕಳುಹಿಸಿದ್ದಲ್ಲ ನಾವು ಸಚಿವರಿದ್ದಾಗ ಮಾಡಿದ್ದೇವೆ, ಮಾಡಿಲ್ಲವೆಂದು ತಾವು ಹೇಳುತ್ತೀರಿ.

(ಗೊಂದಲ)

**Mr. SPEAKER:** I have permitted Mr.Kharge to answer ಅವರು ಹೇಳಿದ ಮೇಲೆ ಶ್ರೀ ಸೋಮಶೇಖರ್ ಅವರು ಏನಾದರೂ ಹೇಳುವುದಿದ್ದರೆ ಹೇಳಬಹುದು. I have no objection.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಯಾವುದೋ ಒಂದು ಷುಲ್ಲಕ ಕಾರಣವನ್ನು ತೆಗೆದುಕೊಂಡು, ವೈಯಕ್ತಿಕವಾಗಿ ನಾನು ಹಾಗೆ ಮಾಡಿದ್ದೇನೆ ಹೀಗೆ ಮಾಡಿದ್ದೇನೆ ಎಂದು ಹೇಳುವುದು ಸರಿಯಲ್ಲ, ಯಾರೂ ಕೂಡ ಹೀಗೆ ಮಾತನಾಡುವುದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ, ಅನೇಕ ಸಾರಿ ಆಡಳಿತದಲ್ಲಿದ್ದಾಗ, ಮಂತ್ರಿಗಳಿಗೆ ರಿಕ್ವೆಸ್ಟ್‌ಗಳು ಬರುತ್ತವೆ, ಸರಿ ಇದ್ದರೆ ಮಾಡಬಹುದು, ಸರಿ ಇಲ್ಲವೆಂದರೆ ಇದು ಸರಿ ಇಲ್ಲವೆಂದು ಹೇಳಬೇಕಾಗುತ್ತದೆ; ಹೀಗೆ ಒಂದಲ್ಲ ಹತ್ತಾರು ಕೇಸ್‌ಗಳನ್ನು ನಾವು ಹೇಳಬಹುದು.1989ರಲ್ಲಿ ನನ್ನನ್ನು ಕೊಲೆ ಮಾಡುವ ಪ್ರಯತ್ನ ನಡೆಯಿತು, ಮರ್ಡರ್ ಕೇಸ್ ರಿಜಿಸ್ಟರ್ ಆಯಿತು. ಇದನ್ನು ನಮ್ಮ ವಿರೋಧಿಗಳು ಮಾಡಿದ್ದು, ಅವರು ಯಾರ ಪಕ್ಷದಲ್ಲಿದ್ದಾರೆಂಬುದ ಸಿಂಧ್ಯಾರವರಿಗೂ ಕೂಡ ಗೊತ್ತಿದೆ. ಆ ಕೇಸ್ ಇವರ ಸರ್ಕಾರ (ಜನತಾದಳ) ಅಧಿಕಾರಕ್ಕೆ ಬಂದಾಗ ವಿತ್‌ಡ್ರಾ ಆಯಿತು. ಆದರೆ ನಾನು ಎಂದೂ ಕೂಡ ವಿತಕ್ಕೆ ವಿತ್‌ಡ್ರಾ ಮಾಡಿಕೊಂಡಿರೆಂದು ಕೇಳಲಿಲ್ಲ, ಪುನಃನಾನು ಆ ಕೇಸ್ ಅನ್ನು ರಿಇನ್‌ಸ್ಟೇಟ್ ಮಾಡಿಸಬಹುದಾಗಿತ್ತು ಅಥವಾ ಪೊಲೀಸ್ ಸ್ಟೇಷನ್‌ನಲ್ಲಿ 20-30 ವರ್ಷಗಳ ಹಿಂದೆ ಇದ್ದ ಅವರ ಹೆಸರುಗಳನ್ನು ಇಡಬಹುದಾಗಿತ್ತು, ನಾನು ಆ ಕೆಲಸವನ್ನು ಮಾಡಿಲ್ಲ. ಆದರೆ ಯಾವುದೋ ಒಂದು ಕಾರಣಕ್ಕೆ ಜೋಡಿಸಿಕೊಂಡು ಹೋಗುವುದು ಸರಿಯಲ್ಲ, ದಯವಿಟ್ಟು ಯಾವ ಸದಸ್ಯರ ಮೇಲು ಕೂಡ ವೈಯಕ್ತಿಕವಾಗಿ ಒಬ್ಬರ ಮೇಲೆ ಮತ್ತೊಬ್ಬರು ಮಂತ್ರಿಗಳಾಗಲಿ, ಸದಸ್ಯರಾಗಲಿ ಈ ರೀತಿಯಾಗಿ ಹೇಳುವುದು ಸರಿಯಲ್ಲ. ಏಕೆಂದರೆ, ಅನೇಕ ಸಂದರ್ಭಗಳು ಕಾರಣಗಳಿರುತ್ತವೆ, ಕಾರಣಾಂತರಗಳಿಂದ ಒಬ್ಬರ ಬಗ್ಗೆ ಒಳ್ಳೆಯದನ್ನು ಹೇಳುತ್ತಿರುತ್ತೇವೆ, ಅನೇಕ ಸಾರಿ ಕೆಲಸ ಮಾಡಲಿಲ್ಲವೆಂದರೆ ಕೆಟ್ಟದ್ದನ್ನು ಹೇಳಿರುತ್ತೇವೆ ವರ್ಗಾವಣೆಯನ್ನು ನಾನು ಅವರದ್ದು ಮಾಡಿದೆ, ಇವರದ್ದು ಎಂದು ಇಲ್ಲಿ ಚರ್ಚೆ ಮಾಡಿಕೊಂಡು ಹೋಗುವುದು ಸರಿಯಲ್ಲ. ಏನು ಕಾನ್‌ಸ್ಟೇಬಲ್

ಟ್ರಾನ್ಸ್‌ಫರ್ ಆರ್ಡರ್ ಇಲ್ಲಿಂದ ಹೋಗುತ್ತದೆಯೆ? ಯಾವುದಾದರೂ ಬಂದಾಗ ಎಕ್ಸಾಮಿನ್ ಮಾಡಿ ಎಂದು ಕಳುಹಿಸಿರಬಹುದು, ನಾವೇನು ಇನ್ಸ್‌ಪೆಕ್ಟರ್‌ಗಳ ಟ್ರಾನ್ಸ್‌ಫರ್ ಆರ್ಡಡ್ ತೆಗೆಯುತ್ತೇವೆಯೆ? ಎಲ್ಲರಿಗೂ ಅವರದೇ ಆದ ಅಧಿಕಾರವಿರುತ್ತದೆ, ರೂಲ್ಸ್ ಪ್ರಕಾರ ಮಾಡಬೇಕಾಗುತ್ತದೆ, ಹೋಗುತ್ತದೆ. ಅದನ್ನು ಬಿಟ್ಟು ನಾವು ಇಲ್ಲಿ ಟ್ರಾನ್ಸ್‌ಫರ್ ಪೊಸ್ಟಿಂಗ್ಸ್ ಆರ್ಡರ್‌ಗಳ ಬಗ್ಗೆ ಇಲ್ಲಿ ಚರ್ಚೆ ಮಾಡಕೊಂಡು ಕುಳಿತುಕೊಳ್ಳುವುದು, ವೈಯಕ್ತಿಕವಾಗಿ ಒಬ್ಬರ ಮೇಲೆ ಮತ್ತೊಬ್ಬರು ಆರೋಪ ಮಾಡುವುದು, ಅಧ್ಯಕ್ಷರೆ, ನನಗನ್ನಿಸಿದಂತೆ ಇದು ಸರಿಯಲ್ಲ, ದಯವಿಟ್ಟು ಇದಕ್ಕೆ ಕಡಿವಾಣ ಹಾಕಬೇಕು, ಇದನ್ನು ಇಲ್ಲಿಗೆ ನಿಲ್ಲಿಸಬೇಕು.

ಅಧ್ಯಕ್ಷರು: ಮಾನ್ಯ ಸೋಮಶೇಖರ್‌ರವರು ಮಾತನಾಡಿ ಮೇಲೆ ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡೋಣ.

ಶ್ರೀ ಬಿ.ಸೋಮಶೇಖರ್: ನಾವು ಯಾರೇ ಶಾಸಕರು ಹೇಳಿದರೆ, ನ್ಯಾಯವಿದ್ದರೆ, ಆಡಳಿತಾತ್ಮಕ ದೃಷ್ಟಯಿಂದ ಒಳ್ಳೆಯದಿದ್ದರೆ ಮಾಡುತ್ತೇವೆ ಇಲ್ಲದಿದ್ದರೆ ಇಲ್ಲವೆಂದು ಹೇಳುತ್ತೇವೆಂದು ಮಾನ್ಯ ಗೃಹ ಮಂತ್ರಿಗಳು ಹೇಳಿದರು. ಬಹುಶ: ನಾವು ಹೇಳುವುದೆಲ್ಲಾ ರಾಜಕೀಯವಾದ ಶಿಫಾರಸ್ಸುಗಳು, ಇವರು (ಆಡಳಿತ ಪಕ್ಷದವರು) ಹೇಳುವುದೆಲ್ಲಾ ಆಡಳಿತಾತ್ಮಕವಾದವುಗಳು ಎನ್ನುವುದಕ್ಕೆ Classic example, I would like to give to the House. ನನ್ನ ಕ್ಷೇತ್ರದಲ್ಲಿ ಅಲಗೂರೆನ್ನುವ ಒಂದು ಪೊಲೀಸ್ ಠಾಣೆ ಇದೆ.....

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ: ಅಧ್ಯಕ್ಷರೆ ಮಾತನಾಡಲು ಎಲ್ಲರಿಗೂ ಅವಕಾಶ ಕೊಡಿ, ಪೂರ್ಣಪ್ರಮಾಣದ ಚರ್ಚೆಗೆ ಅವಕಾಶ ಮಾಡಿಕೊಡಿ ನಾನು ಮಾತನಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಸೋಮಶೇಖರ್‌ರವರು ಒಂದು ನಿಮಿಷ ಮಾತನಾಡಿದ ಮೇಲೆ ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸೋಣ, ಇದು ನನ್ನ ಮನವಿ.

ಶ್ರೀ ಕರಿಯಣ್ಣ: ಅಧ್ಯಕ್ಷರೆ, ಅವರ ಕ್ಷೇತ್ರಕ್ಕೆ ಸಂಬಂಧಿಸಿದ ಆಡಳಿತಾತ್ಮಕ ವಿಚಾರವನ್ನೆಲ್ಲಾ ಇಲ್ಲಿ ಚರ್ಚೆ ಮಾಡಲು ಅವಕಾಶ ಕೊಟ್ಟರೆ ಹೇಗೆ?

ಶ್ರೀ ವೈ.ಕೆ. ರಾಮಯ್ಯ: ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಿಸಿದಂತೆ ನಿಯಮಾವಳಿ ಪ್ರಕಾರ ಪೂರ್ಣ ಪ್ರಮಾಣದ ಚರ್ಚೆಗೆ ಅವಕಾಶ ಮಾಡಿಕೊಡಿ, ನಾನೂ ಕೂಡ ಮಾತನಾಡಬೇಕಾಗಿದೆ.

ಶ್ರೀ ಎಸ್.ಎಸ್.ಪಾಟೀಲ್: ಈ ಬಗ್ಗೆ ಮಾತನಾಡಬೇಕು, ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬರೋಣ.

ಅಧ್ಯಕ್ಷರು: ತಮ್ಮ ಸಲಹೆಗಳನ್ನು ಆಲೋಚನೆ ಮಾಡುತ್ತೇನೆಂದು ಹೇಳುತ್ತಿದ್ದೇನೆ. ಸೋಮಶೇಖರ್‌ರವರು ಮಾತನಾಡಿ, ಸ್ವಲ್ಪ ತಾಳಿ ಅವರು ಮುಗಿಸುತ್ತಾರೆ.

ಶ್ರೀ ಕರಿಯಣ್ಣ: ಅಧ್ಯಕ್ಷರೆ, ಒಂದೊಂದು ಕ್ಷೇತ್ರದ ವರ್ಗಾವಣೆಗೆ ಸಂಬಂಧಿಸಿದ ವಿಷಯವನ್ನು ಚರ್ಚೆ ಮಾಡಲು ಯಾವ ನಿಯಮಾವಳಿ ಪ್ರಕಾರ ಅವಕಾಶ ಕೋಡುತ್ತೀರಿ?

(ಗೊಂದಲ)

12.50 ಪಿ.ಎಂ.

ಶ್ರೀ ಬಿ.ಸೋಮಶೇಖರ್: ಮಾನ್ಯ ಸಭಾಧ್ಯಕ್ಷರೇ, ನ್ಯಾಯಬದ್ಧವಾಗಿ ಇದ್ದರೆ ಮಾಡುತ್ತೇವೆ, ನ್ಯಾಯಬದ್ಧವಾಗಿಲ್ಲದಿದ್ದರೆ ಮಾಡುವುದಿಲ್ಲ ಎಂದು ಅವರು ಹೇಳಿದ್ದಾರೆ. ಬಹಳ ಸಂತೋಷ. ಆ ರೀತಿ ನಡೆದುಕೊಂಡು ಬಂದಿದ್ದರೆ, ನಾನು ಅದಕ್ಕೆ ಸಂಪೂರ್ಣವಾದ ಸ್ವಾಗತವನ್ನು ಮಾಡುತ್ತೇನೆ ಮತ್ತು ಮೆಚ್ಚುತ್ತೇನೆ. ಒಂದೇ ಒಂದು ಉದಾಹರಣೆ ಹೇಳುತ್ತೇನೆ.

ಶ್ರೀ ಕರಿಯಣ್ಣ: ಉದಾಹರಣೆ ಹೇಳುವ ಹಾಗಿಲ್ಲ.

(ಗೊಂದಲ)

ಅಧ್ಯಕ್ಷರು: ಹೀಗಾದರೆ ನಾನು ಅಡ್ಜರ್ನ್ ಮಾಡಬೇಕಾಗುತ್ತದೆ. ಅಡ್ಜರ್ನ್ ಮಾಡದೆ ಬೇರೆ ಮಾರ್ಗವೇ ಇಲ್ಲ. ನೀವು ಉದಾಹರಣೆ ಏಕೆ ಕೊಡುತ್ತೀರಿ? ದಯವಿಟ್ಟು ಉದಾಹರಣೆ ಕೊಡಬೇಡಿ.

ಶ್ರೀ ಕರಿಯಣ್ಣ: ಆಡಳಿತ ಮಾಡುವವರು ಇವರಾ ಅಥವಾ? ಉದಾಹರಣೆ ಕೊಡಲು ಹೇಗೆ ಆಗುತ್ತದೆ? ಯಾರು ಆಡಳಿತ ಮಾಡುವವರು?

ಅಧ್ಯಕ್ಷರು: ಒಂದು ನಿಮಿಷ ತಡೆಯಿರಿ. ಅವರು ಮಾತನಾಡಿ ಮುಗಿಸಲಿ. ತಾವು ಉದಾಹರಣೆ ಹೋಗಬೇಡಿ.

ಶ್ರೀ ಬಿ.ಸೋಮಶೇಖರ್: ನಾನು ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ನಾನು ಇಲ್ಲಿ ಅಪ್ರಸ್ತುತವಾದ ವಿಚಾರವನ್ನು ಪ್ರಸ್ತಾಪ ಮಾಡಿದರೆ ಅಥವಾ ಅನ್‌ಪಾರ್ಲಿ ಮೆಂಟರಿ ಪದಗಳನ್ನು ಬಳಸಿದರೆ ಅದಕ್ಕೆ ತಾವು ಅಬ್ಜೆಕ್ಟ್ ಮಾಡಬೇಕು, ಅವರೂ ಮಾಡಬೇಕು. ಆದರೆ ಈಗ ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ. ಖರ್ಗೆಯವರು ಏನು ಹೇಳಿದ್ದಾರೆ, ಅದಕ್ಕೆ ವ್ಯತಿರಿಕ್ತವಾಗಿ ಮಾಡಿರುವಂಥ ಒಂದು ಉದಾಹರಣೆಯನ್ನು ಕೊಡದಿದ್ದರೆ ಅದು ಸರಿಯಾಗುವುದಿಲ್ಲ.

(ಗೊಂದಲ)

ಶ್ರೀ ಕರಿಯಣ್ಣ: ಖರ್ಗೆಯ ಮಂತ್ರಿಗಳೇ ಅಥವಾ ಅವರು ಮಂತ್ರಿಗಳೇ?

ಅಧ್ಯಕ್ಷರು: ಹೀಗಾದರೆ ಅಡ್ಜರ್ನ್ ಮಾಡಬೇಕಾಗುತ್ತದೆ. ತಾವು ಒಂದು ನಿಮಿಷದಲ್ಲಿ ಮಾತನಾಡಿ. ಹೇಳಿಬಿಡುತ್ತೇನೆ, ಹೇಳಿಬಿಡುತ್ತೇನೆ ಎಂದು ಹೇಳುತ್ತಿದ್ದರೆ ಹೇಗೆ?

ಶ್ರೀ ಎಂ.ಮಹಾದೇವ್: ಅಧ್ಯಕ್ಷರೇ, ಯಾವ ನಿಯಮದ ಪ್ರಕಾರ ಚರ್ಚೆಗೆ ಅವಕಾಶ ಕೊಡುತ್ತಿದ್ದೀರಿ? ಇದನ್ನು ದಯವಿಟ್ಟು ಇಲ್ಲಿಗೆ ಮುಕ್ತಾಯ ಮಾಡಿ.

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ (ಕುಡುವನಹಳ್ಳಿ): ನೀವು ಸೋಮಶೇಖರ್‌ರವರಿಗೆ ಅಲೋ ಮಾಡಿದ್ದೀರಿ. ಅವರು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ಅಧ್ಯಕ್ಷರಿಗೆ ಗೌರವ ತರುವಂಥಹುದೇ ಇದು.

ಅಧ್ಯಕ್ಷರು: ಎಲ್ಲರೂ ಒಂದು ನಿಮಿಷ ತಡೆಯಿರಿ. ಮುಗಿದು ಹೋಗುತ್ತದೆ.

ಶ್ರೀ ಎಂ.ಮಹಾದೇವ್: ಅವರು ಯಾವ ನಿಯಮದ ಕೆಳಗೆ ಮಾತನಾಡುತ್ತಿದ್ದಾರೆ ಎಂಬುದನ್ನು ಹೇಳಬೇಕು.

ಶ್ರೀ ಬಿ.ಸೋಮಶೇಖರ್: ಖರ್ಗೆಯವರು ಹೇಳಿರತಕ್ಕಂಥಾದ್ದನ್ನು ನಾವು ಕೇಳಿದ್ದೇವೆ. ನಾವು ಹೇಳುವುದನ್ನು ನೀವು ಕೇಳಬೇಕಲ್ಲವೇ?

ಅಧ್ಯಕ್ಷರು: ಗಲಾಟೆಯಾಗುತ್ತಿದೆಯಲ್ಲಾ ಸಿಂಧ್ಯಾರವರೇ, ಒಂದು ಹತ್ತು ನಿಮಿಷ ಅಡ್ಜರ್ನ್ ಮಾಡೋಣ. ಈ ರೀತಿ ಆದರೆ ನಾವು ಹೇಗೆ ಕಂಟ್ರೋಲ್ ಮಾಡುವುದು? ನಾವು ಎಷ್ಟು ಹೇಳಿದರೂ ಕೇಳದಿದ್ದರೆ ಹೇಗೆ?

ಶ್ರೀ ಬಿ.ಸೋಮಶೇಖರ್: ಖರ್ಗೆಯವರು ಹೇಳಿರುವುದನ್ನು ನಾವು ಕೇಳಿದ್ದೇವೆ. ಎಷ್ಟು ಆಡಳಿತಾತ್ಮಕವಾಗಿ ಮಾಡಿದ್ದಾರೆ ಎನ್ನುವುದಕ್ಕೆ ಉದಾಹರಣೆ ಕೊಡುವುದಕ್ಕಾಗಿ ಹೇಳುತ್ತೇನೆ. ಅಲಗೂರು ಪೊಲೀಸ್ ಸ್ಟೇಷನ್ ಮಳವಳ್ಳಿ ಸರ್ಕಲ್‌ಗೆ ಸೇರಬೇಕಾಗಿತ್ತು. ನಾನು ಹೇಳುವುದು ತಪ್ಪಾಗಿದ್ದರೆ ನಾನು ಇವತ್ತು ರಾಜೀನಾಮೆ ಕೊಟ್ಟು ಹೋಗುತ್ತೇನೆ. ದಯವಿಟ್ಟು ಕೇಳಿ.

(ಗೊಂದಲ)

ಅಧ್ಯಕ್ಷರು: ಸೋಮಶೇಖರ್‌ರವರೇ, ಅದೆಲ್ಲಾ ಬೇಡ. ಒಂದು ನಿಮಿಷದಲ್ಲಿ ಮುಗಿಸುತ್ತಾರೆ. ಮುಗಿದು ಹೋಗುತ್ತದೆ ಒಂದು ನಿಮಿಷ ತಡೆಯಿರಿ.

ಶ್ರೀ ಬಿ.ಸೋಮಶೇಖರ್: ನನಗೆ ಬಹಳ ನೋವಾಗಿದೆ. ಕ್ಷಮಿಸಿದು ಕೇಳಿಕೊಳ್ಳುತ್ತೇನೆ, ಇದನ್ನು ಹೇಳಲು ಅವಕಾಶ ಕೊಡಿ. ಒಂದು ಪೊಲೀಸ್ ಸ್ಟೇಷನ್ ಅನ್ನು, ಅದು ಯಾವ ತಾಲ್ಲೂಕಿನಲ್ಲಿದೆ, ಅದೇ ತಾಲ್ಲೂಕಿನ ಸರ್ಕಲ್‌ಗೇ ಕೊಡಬೇಕಾಗಿರತಕ್ಕಂಥಾದ್ದು ಧರ್ಮ. ಇಡೀ ರಾಜ್ಯದಲ್ಲಿ ಏನು ವ್ಯವಸ್ಥೆ ಇದೆ ಎಂದರೆ, ಎಲ್ಲಿ ಪೊಲೀಸ್ ಸ್ಟೇಷನ್ ಇರುತ್ತದೆ, ಅದನ್ನು ಆ ತಾಲ್ಲೂಕಿನ ಸರ್ಕಲ್‌ಗೇ ಅಟ್ಯಾಚ್ ಮಾಡಿರುತ್ತಾರೆ. ನಮ್ಮ ಸರ್ಕಾರವಿದ್ದಾಗ, ನನಗೇ ಗೊತ್ತಿಲ್ಲದ ಹಾಗೆ, ಕೆಲವು ರಾಜಕೀಯ ಕಾರಣಗಳಿಂದ ನಮ್ಮ ಪಕ್ಷದವರೇ ಅದನ್ನು ಬದಲಾವಣೆ ಮಾಡಿಸಿದರು. ಅದನ್ನು ಬೇರೆ ತಾಲ್ಲೂಕಿಗೆ ಅಟ್ಯಾಚ್ ಮಾಡಿಸಿದರು.

(ಗೊಂದಲ)

ಶ್ರೀ ಎಂ.ಶಿವಣ್ಣ: ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವನಾದ ನನಗೂ ಕೂಡ ಅದು ಗೊತ್ತಿದೆ. ಆಡಳಿತಾತ್ಮಕ ದೃಷ್ಟಿಯಿಂದ ಮಾಡಿರತಕ್ಕಂಥಾದ್ದು ಅದು.

ಶ್ರೀ ಬಿ.ಸೋಮಶೇಖರ್: ನಾನು ಹೇಳುತ್ತೇನೆ, ದಯವಿಟ್ಟು ಕೇಳಿ. ನಮ್ಮ ಸರ್ಕಾರ ಹೋಗಿ, ಹೊಸ ಸರ್ಕಾರ ಬಂದ ತಕ್ಷಣ ಅದನ್ನು ಜಾರಿಗೆ ಕೊಟ್ಟರು. ಅಲಗೂರು ಸ್ಟೇಷನ್‌ನ್ನು ಮಾದ್ದೂರು ತಾಲ್ಲೂಕಿನಲ್ಲಿರುವಂಥ ಒಂದು ಸರ್ಕಲ್‌ಗೆ ಅಟ್ಯಾಚ್ ಮಾಡಿದರು. It is unheard of in the police administration in the State. ನಮ್ಮ ಸರ್ಕಾರ ಇದ್ದಾಗ ಇದನ್ನು ಜಾರಿಗೆ ಕೊಟ್ಟಿರಲಿಲ್ಲ. ನಾನು ಆಗ ರೆವಿನ್ಯೂ ಮಿನಿಸ್ಟರ್ ಆಗಿದ್ದೆ. ಇದು ಗೊತ್ತಾದ ತಕ್ಷಣ ಕ್ಯಾನ್ಸಲ್ ಮಾಡುತ್ತಾರೆ ಎನ್ನುವ ಕಾರಣದಿಂದಲೋ ಏನೋ ಜಾರಿಗೆ ಕೊಟ್ಟಿರಲಿಲ್ಲ. ಹಾಗೇ ಇಟ್ಟಿದ್ದರು. ಆದರೆ ಈ ಸರ್ಕಾರ ಬಂದ ತಕ್ಷಣ ಅದನ್ನು ಜಾರಿಗೆ ಕೊಟ್ಟರು. ಈ ರೀತಿಯ ಒಂದು ಬದಲಾವಣೆ ಮಾಡಿದ್ದಾರೆ ಎಂಬುದು ನನಗೆ ಆಗ ಗೊತ್ತಾಯಿತು. ಆಗ ನಾನು ಇದರ ಬಗ್ಗೆ ಐ ಜಿ ಪಿ ಆವರಿಗೆ, ಎಸ್.ಪಿ. ಆವರಿಗೆ ಹೇಳಿದರೆ, ಇದು ಇಂಪ್ರಾಪರ್ ಆಗಿದೆ, ತಾಲ್ಲೂಕು ಒಂದು ಕಡೆ ಇದೆ, ಸ್ಟೇಷನ್ ಇನ್ನೊಂದು ಕಡೆ ಇದೆ ಎಂದು ಹೇಳಿದಾಗ, ಈ ರಾಜ್ಯದಲ್ಲಿ ಎಲ್ಲೂ ಈ ರೀತಿ ಇಲ್ಲ, ತಪ್ಪಾಗಿದೆ, ಅದನ್ನು ಸರಿಪಡಿಸಿಕೊಳ್ಳುತ್ತೇವೆ, ಯಾರೋ ಒಬ್ಬ ಎಸ್ ಪಿ ಯವರು ಸರೆಪ್ಟೀಶಸ್ ಆಗಿ ಗುಟ್ಟಾಗಿ ಪ್ರಪೋಸಲ್ ಕಳುಹಿಸಿದ್ದು ಅದು

ಅಪ್ರೂವ್ ಆಗಿಬಿಟ್ಟಿದೆ, ನಾನು ಇದನ್ನು ಸರಿಮಾಡುತ್ತೇನೆ, ಇದಕ್ಕೆ ಒಂದು ಪ್ರಪೋಸಲ್ ಕಳುಹಿಸಿ ಎಂದು ಹೇಳಿದರು. ಎಸ್ ಪಿ, ಐ ಜಿ ಪಿ ಎಲ್ಲರೂ 2-3 ಸಲ ನೋಡಿ ಕ್ಲಾರಿಫಿಕೇಷನ್ ಮಾಡಿ ಕಳುಹಿಸಿಕೊಟ್ಟರು. ಇದನ್ನು ಕಳುಹಿಸಿಕೊಟ್ಟಾಗ, ಖರ್ಗೆಯವರು ಅದನ್ನು ನೋಡಿ ನಕ್ಕುಬಿಟ್ಟು ಹೌದು ತಪ್ಪಾಗಿದೆ, ನಿಮ್ಮ ಸರ್ಕಾರದಲ್ಲೇ ಆಗಿದೆ ನೋಡಿ ಎಂದು ಹೇಳಿದರು. ಹೌದು, ನಮ್ಮ ಸರ್ಕಾರದಲ್ಲಿ ತಪ್ಪಾಗಿರಬಹುದು, ನೀವು ಇದನ್ನು ಸರಿಪಡಿಸಿ, ಆಡಳಿತಾತ್ಮಕವಾಗಿ ಇದು ಸರಿಯಲ್ಲ, ಪೋಲೀಸ್ ಸ್ಟೇಷನ್ ಒಂದು ಕಡೆ ಇದೆ, ಸರ್ಕಲ್ ಬೇರೆ ತಾಲ್ಲೂಕಿನಲ್ಲಿದೆ, ರಾಜ್ಯದಲ್ಲಿ ಬೇರೆ ಎಲ್ಲೂ ಈ ರೀತಿ ಇಲ್ಲ ಎಂದು ನಾನು ಹೇಳಿದೆ. He was kind enough to pass an order. ಆ ಆರ್ಡರ್ ಪಾಸ್ ಆಗಿ ಸುಮಾರು 7-8 ತಿಂಗಳು ಆಯಿತು. ಅದನ್ನು ಜಾರಿ ಮಾಡಿ ಎಂದರೆ ಇವತ್ತಿನವರೆಗೂ ಜಾರಿ ಮಾಡಿಲ್ಲ. ಏಕೆಂದರೆ, ಅದು ಮುಖ್ಯ ಮಂತ್ರಿಗಳ ಕ್ಷೇತ್ರವಾಗಿದೆ. ಅಲ್ಲದೆ ಅಲ್ಲಿರತಕ್ಕಂಥ ಒಬ್ಬರು ಸರ್ಕಲ್ ಮಂತ್ರಿಗಳ ಕ್ಷೇತ್ರವಾಗಿದೆ. ಅಲ್ಲದೆ ಅಲ್ಲಿರತಕ್ಕಂಥ ಒಬ್ಬರು ಸರ್ಕಾಲ್ ಇನ್ಸ್‌ಪೆಕ್ಟರ್‌ಗೆ ಒಂದು ಸ್ಟೇಷನ್ ಕಡಿಮೆಯಾಗುತ್ತದಂತೆ. In order to please him, in other taluk this police station is attached. ರಾಜಕೀಯ ಒತ್ತಡಗಳಂತೆ. ಅದು ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್, ನಾನು ಕೇಳತಕ್ಕಂಥಾದ್ದು ಇಂಪ್ರಾಪರ್ ಆಗಿದ್ದರೆ ಇವತ್ತೇ ರಾಜೀನಾಮೆ ಕೊಟ್ಟು ಹೋಗುತ್ತೇನೆ. ಪ್ರಾಪರ್ ಆಗಿದ್ದರೆ ಮಾಡುತ್ತೇನೆ, ಇಲ್ಲದಿದ್ದರೆ ಇಲ್ಲ ಎಂದು ಹೇಳಿದರು. ಆರ್ಡರ್ ಮಾಡಿ 8 ತಿಂಗಳು ಆಯಿತು. ಇನ್ನೂ ಜಾರಿ ಮಾಡಿಲ್ಲ. ಇದು ಆಡಳಿತವೇ?

ಅಧ್ಯಕ್ಷರು: ತಾವು ಒಂದು ಅಲಿಗೇಷನ್ ಮಾಡಿದ್ದೀರಿ. ಅದಕ್ಕೆ ಅವರು ಉತ್ತರ ಹೇಳಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರಿಗೆ ನಾನು ಧನ್ಯವಾದಗಳನ್ನು ಹೇಳುತ್ತೇನೆ. ಏಕೆಂದರೆ, ಈ ಇಂಪ್ರಾಪರ್ ಆರ್ಡರ್ ಯಾವಾಗ ಪಾಸ್ ಆಯಿತು ಎನ್ನುವುದು ಅವರಿಗೇ ಗೊತ್ತಿದೆ. ಅವರ ಸರ್ಕಾರ ಇದ್ದಾಗ ಆಗಿದೆ. ನಮ್ಮ ಸರ್ಕಾರ ಬಂದಾಗ ಜಾರಿಯಲ್ಲಿ ಬಂದಿದೆ. ಸಾಮಾನ್ಯವಾಗಿ, ನೋಟಿಫಿಕೇಷನ್ ಯಾವಾಗ ಆಗುತ್ತದೆ ಎಂದು ಅವರಿಗೂ ಗೊತ್ತಿರುವ ಹಾಗೆ ಇದು ಒಂದೇ ದಿವಸದಲ್ಲಿ ಆಗುವುದಿಲ್ಲ. ಅಲ್ಲಿರತಕ್ಕಂಥ ಎಸ್ ಪಿ ಮತ್ತಿತರರೆಲ್ಲರೂ ಸೇರಿ ಜ್ಯೂರಿಸ್ಡ್ಷನ್ ಅನ್ನು ಹಂಚಿಕೆ ಮಾಡಿ, ಎಲ್ಲವನ್ನೂ ಮ್ಯಾಪ್ ಮಾಡಿ ಇಲ್ಲಿಗೆ ಕಳುಹಿಸಿದ ಮೇಲೆ, ಅವರ ಕಾಲದಲ್ಲೇ ಇದು ಡಿವಿಷನ್ ಆಗಿ ಮದ್ದೂರಿಗೆ ಸೇರಿಸಬೇಕು ಎಂದು ಬಂದಿದ್ದನ್ನು ನಾವು ಕೇವಲ ಅಪ್ರೂಪ್ ಮಾಡಿದ್ದೇನೆ. ಇದು ನಾವು ವೈಯಕ್ತಿಕವಾಗಿ ಆಸಕ್ತಿ ತೆಗೆದುಕೊಂಡು ಮಾಡಿದ್ದಲ್ಲ. ಆದರೆ ಇದು ಸರಿಯಲ್ಲ ಎಂದು ಹೇಳಿದ ಮೇಲೆ, ಅದನ್ನು ಸರಿಪಡಿಸಲಿಕ್ಕಾಗಿ ರೀ-ಎಕ್ಸಾಮಿನ್ ಮಾಡಿ ಎಂದು ಹೇಳಿ ನಾನೇ ರೀ-ಎಕ್ಸಾಮಿನ್ ಮಾಡಿಸಿದೆ. ರೀ-ಎಕ್ಸಾಮಿನ್ ಮಾಡಿಸಿದ ಮೇಲೆ ಅದು ನನಗೆ ಬಂತು. ಅದು ಬಂದ ಮೇಲೆ, ಆ್ಯಸ್ ಇಟ್ ಈಸ್ ಅಂದರೆ ಮೊದಲು ಅದು ಹೇಗಿತ್ತೋ ಹಾಗೇ ಇಡತಕ್ಕಂಥಾದ್ದು ಒಳ್ಳೆಯದು ಎಂದು ಆರ್ಡರ್ ಪಾಸ್ ಮಾಡಿದೆ. ಈ ಆರ್ಡರನ್ನು ಪಾಸ್ ಮಾಡಿದ್ದು ಇನ್ಸ್‌ಪೆಕ್ಟರ್‌ಗೋಸ್ಕರವೇ?

(ಗೊಂದಲ)

ಹಿಂದೆ ನಿಮ್ಮ ಸರ್ಕಾರ ಇದ್ದಾಗ ಬೈಫರ್ಕೇಷನ್ ಮಾಡಿದಿರಲ್ಲಾ, ಇನ್ಸ್ ಪೆಕ್ಟರ್‌ಗೋಸ್ಕರ ಬೈಫರ್ಕೇಷನ್ ಮಾಡಿದಿರೇನು? To please that Inspector?/ Who is that

Inspecting? I want to know. Don't talk that you are the only hero and only angel. We are also equal. I have got 31 years service. If you have got any charges, make it, make House Committee. I am ready to face it. You might have worked. ನಾಲ್ಕು ಜನ ನಾಲ್ಕು ಪೋರ್ಟ್‌ಫೋಲಿಯೋ ನೋಡಿರಬಹುದು. ಆದರೆ ನಾನು ಹತ್ತು ಪೋರ್ಟ್‌ಫೋಲಿಯೋಗಳನ್ನು ನೋಡಿದ್ದೇನೆ. Don't make personal allegations. If anybody makes personal allegations, I am also ready to face it. Don't tell. As you know for the post 31 years, I am in this House. All Chief Ministers I have seen. All Ministers I have seen. You know that I have not entered anybody's house wothout invitation or without any meeting or something.

ಶ್ರೀ ಪಿ.ಜಿ.ಆರ್. ಸಿಂಧ್ಯ: ಎಂಟರ್ ಆಗಿದ್ದೀರಿ. ನಿಮ್ಮ ಮಗಳ ಮದುವೆಗೆ ಇನ್ವಿಟೇಶನ್ ಕೊಡಲು ಬಂದಿರಲಿಲ್ಲವೇ?

**SRI MALLIKARJUN KHARGE:** Thank you very much. ಮದೂರು ಮಳವಳ್ಳಿ ಜನಗಳನ್ನು ಇಲ್ಲಿಗೆ ತೆಗೆದುಕೊಂಡು ಬಂದು ಹೇಳತಕ್ಕಂಥಾದ್ದು ಅಷ್ಟೊಂದು ಸರಿಯಲ್ಲ. ಅದಕ್ಕಾಗಿ, ದಯವಿಟ್ಟು ಇದಕ್ಕೆ ಕಡಿವಾಣ ಹಾಕಿ ಇಲ್ಲಿಗೆ ಮುಕ್ತಾಯ ಮಾಡಬೇಕೆಂದು ಹೇಳುತ್ತೇನೆ.

( ಈ ಹಂತದಲ್ಲಿ ಶಾಸಕರಾದ ಎಸ್ ಎಸ್ ಪಾಟೀಲ್‌ರವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು: ದಯವಿಟ್ಟು ಬೇಡ. ಮಾತನಾಡಿದರೆ ಮತ್ತೆ ಅದು ರೈಸ್ ಆಗುತ್ತದೆ. ಅಧ್ಯಕ್ಷರು ಹೇಳಿದುದನ್ನು ಕೇಳಬೇಕು. ಬೇರೆ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ನಾನುಏನೂ ಅಲಿಗೇಷನ್ ಮಾಡುವುದಿಲ್ಲ. ನಾವೆಲ್ಲರೂ ಜನತಾ ಪ್ರತಿನಿಧಿಗಳು. ಜನತಾ ಪ್ರತಿನಿಧಿಗಳಿಗೆ ಗೌರವ ಬರಬೇಕಾದರೆ, ಅಧಿಕಾರಿಗಳ ಆಡಳಿತ ಕಡಿಮೆಯಾಗಬೇಕಾದರೆ ನಾವು ಹೊಂದಾಣಿಕೆ ಮಾಡಿಕೊಂಡು ಹೋಗಬೇಕು. ಸರ್ಕಾರಗಳು ಬದಲಾಗುತ್ತವೆ. ನಾನು ಒಂದು ವೈಯಕ್ತಿಕ ಉದಾಹರಣೆ ಹೇಳುತ್ತೇವೆ. ಆ ರೀತಿ ಆಗದ ಹಾಗೆ ನಾವು ನೋಡಿಕೊಳ್ಳೋಣ. ನಾನು ಆರಿಸಿ ಬಂದು ಮಂತ್ರಿಯಾದಾಗ, ಭ್ರಷ್ಟ, ದುಷ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡೆ. ಈಗ ಅವರೆಲ್ಲರನ್ನೂ ತಂದು ನನ್ನ ಮೇಲೆ ಹಾಕುವುದು. ಆ ರೀತಿ ಆಗಬಾರದು. ನಾವು ಎಲ್ಲಿಯವರೆಗೆ ಆ ರೀತಿ ಮಾಡುತ್ತೇವೆ, ಆಗ ಅಧಿಕಾರಿಗಳು ಮೆರೆಯುತ್ತಾರೆ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ

೫) ಇವಿಯ: ಏತ ನೀರಾವರಿಗೆ ಸಂಬಂಧಪಟ್ಟಂತೆ ಸರ್ಕಾರ ವಿದ್ಯುತ್ ಬಿಲ್ ಕಟ್ಟಿಲ್ಲದ ಕಾರಣ ರೈತರಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ಗೃಹ ಹಾಗೂ ಸಣ್ಣ ನೀರಾವರಿ ಇಲಾಖೆ ಈ ಎರಡಕ್ಕೂ ಒಬ್ಬರೇ ಸಚಿವರು. ಅವರು ಸದನದಲ್ಲಿ ಇದ್ದಾರೆ. ಧನ್ಯವಾದಗಳು. ನನ್ನ ಕ್ಷೇತ್ರದಲ್ಲಿ ಆರು ಸಣ್ಣ ಸಣ್ಣ ಏತ ನೀರಾವರಿ ಯೋಜನೆಗಳಿವೆ. ಈ ಏತ